ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೯ Volume 149	ಬೆಂಗಳೂರು, ಗುರುವಾರ, ಜುಲೈ ೧೦, ೨೦೧೪ (ಆಷಾಢ ೧೯, ಶಕ ವರ್ಷ ೧೯೩೬) Bangalore, Thursday, July 10, 2014 (Aashadha 19 Shaka Varsha 1936)	ಸಂಚಿಕೆ ೨೮ Issue 28

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಅಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

ಸಮಾಜ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಕಇ 67 ಎಸ್‌ಪಿಎ 2013, ಬೆಂಗಳೂರು, ದಿನಾಂಕ: 21.03.2014.

ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟುಗಳ (ದೌರ್ಜನ್ಯ ನಿಯಂತ್ರಣ) ಕಾಯ್ದೆ 1989 ಹಾಗೂ ನಿಯಮ 1995 ತಿದ್ದುಪಡಿ ನಿಯಮಗಳು 2013ರಂತೆ ನಿಯಮ 17(ಎ) ಪ್ರಕಾರ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ಪ್ರತಿಯೊಂದು ಕಂದಾಯ ಉಪ ವಿಭಾಗದ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯನ್ನು ರಚಿಸಲಾಗಿದೆ. ಉಸ್ತುವಾರಿ ಸಮಿತಿಯು ಭಾರತ ಸರ್ಕಾರದ ಅಧಿಸೂಚನೆ ದಿನಾಂಕ: 8.11.2013ರಲ್ಲಿ ಸಮಿತಿಗೆ ನಿಗಧಿಪಡಿಸಿರುವ ಜವಾಬ್ದಾರಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು. ಅಧಿಸೂಚನೆಯ ಪ್ರತಿಯನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಿದೆ. ಸದರಿ ಸಮಿತಿ ಕನಿಷ್ಠ 3 ತಿಂಗಳಿಗೆ ಒಂದು ಬಾರಿಯಾದರೂ ಸಭೆಯನ್ನು ನಡೆಸತಕ್ಕದ್ದು.

1.	ಅಸಿಸ್ಟೆಂಟ್ ಕಮೀಷನರ್	ಅಧ್ಯಕ್ಷರು
2.	ಪೊಲೀಸ್ ಉಪ ವಿಭಾಗಾಧಿಕಾರಿಗಳು (ಡಿವೈಎಸ್‌ಪಿ)	ಸದಸ್ಯರು
3.	ಸಂಬಂಧಪಟ್ಟ ಉಪ ವಿಭಾಗದ ಎಲ್ಲಾ ತಾಲ್ಲುಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿಗಳು	ಸದಸ್ಯರು
4.	ಸಂಬಂಧಪಟ್ಟ ಉಪ ವಿಭಾಗದ ಎಲ್ಲಾ ತಹಸೀಲ್ದಾರ್‌ಗಳು	ಸದಸ್ಯರು
5.	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಎಲ್ಲಾ ಜಿಲ್ಲಾ ಪಂಚಾಯತ್ ಸದಸ್ಯರು	ಸದಸ್ಯರು
6.	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಇಬ್ಬರು ಅಧಿಕಾರೇತರ ಸದಸ್ಯರು (ಉಪ ವಿಭಾಗಾಧಿಕಾರಿಗಳು ನಾಮ ನಿರ್ದೇಶನ ಮಾಡುವುದು)	ಸದಸ್ಯರು
7.	ಇತರ ವರ್ಗದ ಇಬ್ಬರು ಎನ್.ಜಿ.ಓ. ಅಧಿಕಾರೇತರ ಸದಸ್ಯರು (ಉಪ ವಿಭಾಗಾಧಿಕಾರಿಗಳು ನಾಮ ನಿರ್ದೇಶನ ಮಾಡುವುದು)	ಸದಸ್ಯರು
8.	ಸಂಬಂಧಪಟ್ಟ ಉಪ ವಿಭಾಗದ ಎಲ್ಲಾ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು	ಸದಸ್ಯರು
9.	ಸಂಬಂಧಪಟ್ಟ ಉಪ ವಿಭಾಗದ ಕೇಂದ್ರ ಸ್ಥಾನದಲ್ಲಿರುವ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು	ಸದಸ್ಯ ಕಾರ್ಯದರ್ಶಿಗಳು

Note:- ಸದರಿ ಸಮಿತಿಗೆ ಕೇಂದ್ರ ಸರ್ಕಾರದಿಂದ 3 ಸಮಾಜ ಸೇವಕರನ್ನು ನಾಮನಿರ್ದೇಶನ ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ನರಸಿಂಹಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ–2(ಪ್ರ)

ಸಮಾಜ ಕಲ್ಯಾಣ ಇಲಾಖೆ

PR.397

SC.5

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಯೋಇ 62 ಯೋವಿವಿ 2014, ಬೆಂಗಳೂರು, ದಿನಾಂಕ: 02.06.2014.

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ದಕ್ಷಿಣ ಕನ್ನಡ ಜಿಲ್ಲೆಯ ಬಂಡ್ವಾಳ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳಿಗೆ ಈ ಕೆಳಕಂಡ ಸದಸ್ಯರನ್ನು ನಾಮ ನಿರ್ದೇಶನ ಮಾಡಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಧಿಕಾರೇತರ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕು ಕೆ.ಡಿ.ಪಿಗೆ

ಕ್ರ.ಸಂ	ಹೆಸರು	ವರ್ಗ
1	ಶ್ರೀ ಸತೀಶ್ ಕುಮಾರ್ ಬಿನ್ ನಮಿರಾಜ ಬಲ್ಲಾಳ್, ಪಿಲಿಂಗಾಲ ಮನೆ, ಕಾವಳಪಡೂರು ಗ್ರಾಮ, ದಕ್ಷಿಣ ಕನ್ನಡ ಜಿಲ್ಲೆ	ಸಾಮಾನ್ಯ
2	ಶ್ರೀ ಉಮೇಶ್ ಬೋಳಂತೂರು ಬಿನ್ ಆನಂದ ಸಪಲ್ಯ, ನರಿಕೊಂಬು ಗ್ರಾಮ, ದಕ್ಷಿಣ ಕನ್ನಡ ಜಿಲ್ಲೆ.	ಹಿಂದುಳಿದ ವರ್ಗ
3	ಶ್ರೀ ರಾಜೇಶ್ ಬಾಳೆಕಲ್ಲು ಬಿನ್ ಭರತ್, ಬಾಳೆಕಲ್ಲು, ಮಾಣಿಲ ಗ್ರಾಮ, ದಕ್ಷಿಣ ಕನ್ನಡ ಜಿಲ್ಲೆ	ಸಾಮಾನ್ಯ
4	ಶ್ರೀ ಅಬ್ದುಲ್ಲ ಎ.ಬಿ ಅಗರಿ ಮನೆ, ಕೊಳ್ನಾಡು ಗ್ರಾಮ, ದಕ್ಷಿಣ ಕನ್ನಡ ಜಿಲ್ಲೆ.	ಅಲ್ಪಸಂಖ್ಯಾತರು
5	ಶ್ರೀ ಲಿಂಗಪ್ಪ ಕೈಲಾರ್ ಬಿನ್ ಬಪ್ಪಯ್ಯ, ಕಾವಳಮೂಡುರು ಗ್ರಾಮ, ದಕ್ಷಿಣ ಕನ್ನಡ ಜಿಲ್ಲೆ.	ಪರಿಶಿಷ್ಟ ಜಾತಿ
6	ಶ್ರೀಮತಿ ಕಾಂಚಲಾಕ್ಷಿ ಕೋಂ ನಾರಾಯಣ ಪೂಜಾರಿ, ತಿಂಗಳಾಡಿ, ಮಣಿನಾಲ್ಕೂರು ಗ್ರಾಮ, ದಕ್ಷಿಣ ಕನ್ನಡ ಜಿಲ್ಲೆ.	ಮಹಿಳೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ತಿಪ್ಪೇಸ್ವಾಮಿ

ಸರ್ಕಾರದ ಉಪ ಕಾರ್ಯದರ್ಶಿ(ಆಡಳಿತ),

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

PR.398
SC.25

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಯೋಇ 61 ಯೋವಿವಿ 2014, ಬೆಂಗಳೂರು, ದಿನಾಂಕ: 02.06.2014.

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳನ್ನು (20 ಅಂಶಗಳ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿಗಳಿಗೆ ಈ ಕೆಳಕಂಡ ಸದಸ್ಯರನ್ನು ನಾಮ ನಿರ್ದೇಶನ ಮಾಡಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಧಿಕಾರೇತರ ಸದಸ್ಯರನ್ನಾಗಿ ಸರ್ಕಾರವು ನಾಮ ನಿರ್ದೇಶನ ಮಾಡಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕು ಕೆ.ಡಿ.ಪಿಗೆ

ಕ್ರ.ಸಂ	ಹೆಸರು	ವರ್ಗ
1	ಶ್ರೀ ಕೆ.ವಿ ಗೌರಾಯಪ್ಪ ಬಿನ್ ರಾಜಿವೆಂಕಟರಾಯಪ್ಪ ಕೇತೇನಹಳ್ಳಿ	ಪರಿಶಿಷ್ಟ ಪಂಗಡ
2	ಶ್ರೀ ಬಿ. ಕೆ. ದಿನೇಶ್ ಬಿನ್ ಕೃಷ್ಣಪ್ಪ, ಬೊಮ್ಮೇನಹಳ್ಳಿ	ಹಿಂದುಳಿದ ವರ್ಗ
3	ಶ್ರೀ ಟಿ. ಆರ್. ಜಗದೀಶ್ ಬಿನ್ ರಂಗಪ್ಪ, ತಮ್ಮನಾಯ್ಕನಹಳ್ಳಿ	ಸಾಮಾನ್ಯ
4	ಶ್ರೀ ಎಂ. ಎಸ್. ಅಶೋಕ್ ಕುಮಾರ್ ಬಿನ್ ಎಂ. ಶಿವಾನಂದ ಅಂದಾರ್ಲಹಳ್ಳಿ	ಸಾಮಾನ್ಯ
5	ಶ್ರೀ ಇನಾಯತುಲ್ಲಾ ಬಿನ್ ಫಕ್ರುದ್ದೀನ್ ಪೆರೆಸಂದ್ರ	ಅಲ್ಪಸಂಖ್ಯಾತರು
6	ಶ್ರೀಮತಿ ಶಾಂತಾ ಕೋಂ ಶ್ರೀರಾಮ್, ನಿಮಾಕಲಕುಂಟೆ	ಮಹಿಳೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ತಿಪ್ಪೇಸ್ವಾಮಿ

ಸರ್ಕಾರದ ಉಪ ಕಾರ್ಯದರ್ಶಿ(ಆಡಳಿತ),

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

PR.399
SC.25

URBAN DEVELOPMENT SECRETARIAT

NOTIFICATION

UDD 440 MNY 2012, Bangalore, Dated: 31.05.2014.

The draft of the folowing rules further to amend the Karnataka Municipal Corporations Rules, 1977, which the Government of Karnataka proposes to make in exercise of the powers conferred by section 421 read with section 91 of the Karnataka Municipal Corporations Act , 1976 (Karnataka Act 14 of 1977), is hereby published as required by sub-section (1) of section 421 of the said Act,

for the information of the persons likely to be affected there by and notice is hereby given that the said draft will be taken into consideration after fifteen days from the date of its publication in the official Gazette.

Any objection or suggestion, which may be received by the State Government from any person with respect to the said draft before the expiry of the period specified above, will be considered by the State Government Objections and suggestions may be addressed to the Additional Chief Secretary to Government, Urban Development Department, Vikasa Soudha, Bangalore-01

DRAFT RULES

1. **Title and commencement:- (**1) These rules may be called the Karnataka Municipal Corporations (Amendment) Rules, 2013. **(2)** They shall come into force from the date of their publication in the official Gazette.
2. **Amendment of rule 7:** In the Karnataka Municipal Corporations Rules, 1977, in rule 7 in sub rule (2), for the words ``Rupees Twenty lakhs'' the words Rupees Five Lakhs'' shall be substituted

By Order and in the name of the Governor of Karnataka,

N. Gopalaiah

Under Secretary to Government,

Urban Development Department (B.B.M.P)

PR.400
SC.400

URBAN DEVELOPMENT SECRETARIAT

NOTIFICATION

UDD 99 PRJ 2013, Bangalore, Dated: 07.10.2013.

In exercise of the powers conferred by sub-section (2) of section (1) of the Karnataka Municipal Corporations and Certain Other Law (Second Amendment) Act, 2012 (Karnataka Act No. 31 of 2012) Government of Karnataka hereby appoints the 7th Day of October 2013 as the date on which the said Act shall come into force.

By Order and in the name of the Governor of Karnataka,

K. S. BHAGYAMMA

Under Secretary to Government,

Urban Development Department (PMC)

PR.401
SC.500

ಕಾರ್ಮಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಾಇ 65 ಎಲ್‌ಡಬ್ಲ್ಯೂಎ 2014, ಬೆಂಗಳೂರು, ದಿನಾಂಕ: 11.06.2014.

ಕೈಗಾರಿಕಾ ವಿವಾದಗಳ ಕಾಯಿದೆ 1947ರ (ಕೇಂದ್ರಾಧಿನಿಯಮ 1947ರ ಸಂಖ್ಯೆ: xiv) ಸೆಕ್ಷನ್ 2 ಖಂಡ (n) ಉಪಖಂಡ (vi) ರ ಮೇರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ಅಧಿಸೂಚನೆ ಸಂಖ್ಯೆ; ಕಾಇ 223 ಎಲ್‌ಡಬ್ಲ್ಯೂಎ 2013, ದಿ: 04.02.2014ರಲ್ಲಿ ಸಾರ್ವಜನಿಕ ಉಪಯುಕ್ತ ಸೇವೆ ಎಂಬುದಾಗಿ ದಿನಾಂಕ: 08.12.2013ರಿಂದ ಮುಂದಿನ 6 ತಿಂಗಳ ಅವಧಿಯವರೆಗೆ ಜಾರಿಯಲ್ಲಿರುವಂತೆ ಘೋಷಿಸಲಾಗಿತ್ತು.

ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಅವಧಿಯನ್ನು ಮುಂದಿನ 6 ತಿಂಗಳ ಅವಧಿಗೆ ವಿಸ್ತರಿಸಲು ಸರ್ಕಾರವು ಪರಿಗಣಿಸಿದೆ. ಆದ್ದರಿಂದ, ಕೈಗಾರಿಕಾ ವಿವಾದಗಳ ಕಾಯಿದೆ 1947 (ಕೇಂದ್ರಾಧಿನಿಯಮ 1947ರ ಸಂಖ್ಯೆ: xiv) ಸೆಕ್ಷನ್ 2 ಖಂಡ (n) ಉಪಖಂಡ (vi) ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ಸಾರ್ವಜನಿಕ ಉಪಯುಕ್ತ ಸೇವೆ ಎಂಬುದಾಗಿ ದಿನಾಂಕ: 08.06.2014ರಿಂದ ಜಾರಿಗೆ ಬರುವಂತೆ ಮುಂದಿನ 6 ತಿಂಗಳ ಅವಧಿಯವರೆಗೆ ವಿಸ್ತರಿಸಿ ಘೋಷಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪ್ರಭುದೇವ

ಸರ್ಕಾರದ ಅಧೀನ ಕಾರ್ಯದರ್ಶಿ

ಕಾರ್ಮಿಕ ಇಲಾಖೆ.

PR.403

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 23 ನಾಸೇಖಾ 2014, ಬೆಂಗಳೂರು, ದಿನಾಂಕ: 03.06.2014.

ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011ರ (ಕರ್ನಾಟಕ ಅಧಿನಿಯಮ 01, 2012) ಸೆಕ್ಷನ್ 04ರಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಸದರಿ ಅಧಿನಿಯಮದ ಅನುಸೂಚಿಯನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಿದೆ. ಯಾವುದೆಂದರೆ.

ಸದರಿ ಅಧಿನಿಯಮದ ಅನುಸೂಚಿಯಲ್ಲಿ:

ಶೀರ್ಷಿಕೆ-4ರ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ, "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011" ರ ಅನುಸೂಚಿಯಲ್ಲಿ:

1. ಕ್ರಮ ಸಂಖ್ಯೆ:: 34, 36, 37, 38, 39 ಮತ್ತು 40 ಗಳ ಅಂಕಣ 5ರಲ್ಲಿನ ಸಕ್ಷಮ ಅಧಿಕಾರಿ **"ತಹಸೀಲ್ದಾರ್"** ಬದಲಾಗಿ **"ಭೂದಾಖಲೆಗಳ ಸಹಾಯಕ ನಿರ್ದೇಶಕರು"** ಎಂಬುದಾಗಿ ಓದಿಕೊಳ್ಳತಕ್ಕದ್ದು.

2. ಕ್ರಮ ಸಂಖ್ಯೆ: 34, 36, 37, 38, 39 ಮತ್ತು 40 ಗಳ ಅಂಕಣ 7ರಲ್ಲಿನ ಮೇಲ್ಮನವಿ ಪ್ರಾಧಿಕಾರ **"ಅಸಿಸ್ಟೆಂಟ್ ಕಮೀಷನರ್"** ಬದಲಾಗಿ **"ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರು"** ಎಂಬುದಾಗಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ಎನ್. ವರಪ್ರಸಾದ ರೆಡ್ಡಿ
ಆಡಳಿತಾಧಿಕಾರಿಗಳು ಮತ್ತು ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ(ಆಡಳಿತ ಸುಧಾರಣೆ–ನಾಗರೀಕ ಸೇವೆಗಳು)

PERSONNEL AND ADMINISTRATIVE REFORMS SECRETARIAT

NOTIFICATION

NO. DPAR 23 NaSeKha 2014 Bangalore, Dated: 03.06.2014.

In exercise of the powers conferred by Section 4 of the Karnataka Sakala Services Act, 2011 (Karnataka Act 1 of 2012), the Government of Karnataka, hereby amends the schedule appended to the said Act, as follows, namely:-

Under the heading-4 ``Revenue Department"

(1) Serial No. 34, 36, 37, 38, 39 And 40, in column 05 Competent Officer ``**Tahsildar"** shall be substituted and read as `` **Assistant Director of Land Records"**.

(2) Serial No. 34, 36, 37, 38, 39 And 40, in column 07 Appellate Authority ``**Assistant Commissioner"** shall be substited and read **as ``Technical Assistants to Deputy Commissioners and Ex-officio Deputy Director of Land Records"**

By Order and in the name of the Governor of Karnataka,
B. N. Varaprasad Reddy
Administrative Officer and
Ex-officio Under Secretary to Government, DPAR (AR-Citizen Services)

PR.404
SC.5,000

FOREST ENVIRONMENT AND ECOLOGY SECRETARIAT

NOTIFICATION

NO. FEE 41 FDP 2014 BANGALORE, DATED: 29.04.2014.

The Government of Karnataka hereby notifies the areas under the territorial jurisdiction of range forest officers of Karnataka Forest Department including wildlife and Mobile Squads of the Vigilance Wing Circles Divisions to be the specified areas under Section 62-A of Karnataka Forest Act, 1963 for the purpose of offences under this Act to exercise powers conferred on an officer in-charge of a poice Station by the provision of the Code of Criminal procedure 1973.

This order os deemed to have come into effect from the date of issue of amendment to this Section in the Act 20 of 2000 i.e, 04.10.2000.

The Notification No. FEE 104 FDP 2010 dated: 01.07.2010 is hereby repealed

By Order and in the name of the Governor of Karnataka,
S. P. PATIL
Under Secretary To Government
Forest, Environment And Ecology Department

PR.406
SC.550

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 98 ಎಲ್‌ಆರ್‌ಎ 2014, ಬೆಂಗಳೂರು, ದಿನಾಂಕ: 31.05.2014.

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 48ರ ಉಪ ಕಲಂ (1)ರಿಂದ (3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮ ನಿರ್ದೇಶನ ಮಾಡಿ ಮಾನ್ವಿ ತಾಲ್ಲೂಕು ಭೂ ನ್ಯಾಯ ಮಂಡಳಿಯನ್ನು ರಚಿಸಿ ಆದೇಶ ಹೊರಡಿಸಿದೆ.

ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
ರಾಯಚೂರು ಜಿಲ್ಲೆ, ಮಾನ್ವಿ ತಾಲ್ಲೂಕು.	1) ಶ್ರೀ ತನ್ವೀರ್ ಹಸನ್ ಬಿನ್ ನೂರುಲ್ ಹಸನ್ 2) ಶ್ರೀ ವೀರನಗೌಡ ಬಿನ್ ಮರಿಲಿಂಗಣ್ಣ (ಪೋತನಾಳ) 3) ಶ್ರೀ ಬಸವರಾಜ, ಬಿ.ಎ. ಬಿನ್ ಪಾಮನಕಲ್ಲೂರು 4) ಶ್ರೀ ವೆಂಕಟೇಶ್ ಬಿನ್ ಭೀಮಯ್ಯ (ಜಾಲಾಪುರ) (ಮೀಸಲಾತಿ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ. ಎಂ. ದಾಕ್ಷಾಯಣಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಸುಧಾರಣೆ)

PR.413
SC.15

REVENUE SECRETARIAT

NOTIFICATION

NO. RD 70 BHUDASA 2014, BANGALORE, DATED: 30.05.2014.

In exercise of the powers conferred by sub-section (1) of section 195 of Karnataka Land Revenue Act, 1964 (Karnataka Act 12 of 1964) and in partial modification of Notification No: RD 70 Bhudasa 2005, Dated: 20.05.2006 and all other Notification issued in this behalf the Government of Karnataka hereby delegates the power specified in column (3) to the officer specified in column (4) there of

TABLE

SL. NO.	DESCRIPTION OF THE POWER	DESIGNATION OF THE OFFICER WITH WHOM THE POWERS ARE VESTED ON THE DATE OF THE NOTIFICATION	DESIGNATION OF THE OFFICER TO WHOM THE POWERS ARE DELEGATED
1	Power of revision on the orders passed by Technical Assistant to the Deputy Commissioner and Ex-officio Deputy Director of Land Records-Section 56 of the Karnataka Land Revenue Act, 1964	Director, Survey Settlement and Land Records	Commissioner/Deputy Commissioner of the concerned District

By Order and in the name of the Governor of Karnataka,

Revaiah

Under Secretary To Government

Revenue Department (SSLR) (I/C)

PR.414

SC.200

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಸಿಆಸುಇ 20 ಸೇವನೆ 2014 ಬೆಂಗಳೂರು, ದಿನಾಂಕ: 21/04/2014.

ಕರ್ನಾಟಕ ಸಿವಿಲ್ ಸೇವಾ(ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978, ಇದ್ದು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ: 25-02-2014ರ ಅಧಿಸೂಚನೆ ಸಂಖ್ಯೆ: ಸಿಆಸುಇ 20 ಸೇವನೆ 2014ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 25/02/2014ರ ಕರ್ನಾಟಕ ರಾಜ್ಯಪತ್ರದ ಭಾಗ-IVಎ (ಪಿ.ಆರ್.ಸಂ: 151)ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು ದಿನಾಂಕ: 25/02/2014ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗದಿರುವುದರಿಂದ;

ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ, 14)ರ 8ನೇ ಪ್ರಕರಣದೊಂದಿಗೆ ಓದಿಕೊಂಡ 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) (ತಿದ್ದುಪಡಿ) ನಿಯಮಗಳು, 2014 ಎಂದು ಕರೆಯತಕ್ಕದ್ದು.

   (2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 4ಕ್ಕೆ ತಿದ್ದುಪಡಿ:-** ಕರ್ನಾಟಕ ಸಿವಿಲ್ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 1978ರ, ನಿಯಮ 4ರ ಉಪನಿಯಮ (2)ರ ನಂತರ ಈ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು, ಅಂದರೆ:-

"ಪರಂತು ಕರ್ನಾಟಕ ಸಿವಿಲ್ ಸೇವಾ (ಲಿಪಿಕ ಹುದ್ದೆಗಳ ನೇಮಕಾತಿ) ನಿಯಮಗಳು, 2013 ಜಾರಿಗೆ ಬರುವ ದಿನಾಂಕದಂದು ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆ ಹೊಂದಿ ಈಗಾಗಲೇ ಸೇವೆಯಲ್ಲಿರುವವರ ಮುಂಬಡ್ತಿ ಅಥವಾ ವರ್ಗಾವಣೆಗೆ ಪದವಿ ಪೂರ್ವ ಶಿಕ್ಷಣ ಪರೀಕ್ಷೆ ಅಥವಾ ಇದರ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಅರ್ಹತೆಯನ್ನಾಗಿ ನಿಗದಿಪಡಿಸಿರುವುದು ಅನ್ವಯಿಸುವುದಿಲ್ಲ".

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ. ಮಂಗಳ. ಜಿ. ಎಸ್

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-1)

PR.376

SC.1000

HOME SECRETARIAT

NOTIFICATION

HD 266 PCR 2007 BANGALORE, DATED: 04.04.2014.

In exercise of the powers conferred by Section 14 of Scheduled Castes and the Scheduled Tribes (Prevention Of Atrocities) Act 1989 (Central Act 33 of 1989) and in partial modification of the Notification of even no. dated: 04.12.2007 issued in this behalf, hereby, with effect from publication of this notification re-designates the Additional District & Sessions Court, Chickballapur to function

as Special Court to try the Special Cases in respect of the areas falling under Chickballapur and permission also accorded to transfer the Spl. C.C Cases and EACC Cases pending as on date before the District & Sessions court, Chickballapur and any cases arising out of Forest and Excise Department to this Special Court.

By order and in the name of the President of India
Govindaswamy
Under Secretary to Government (i/c)
Home Department (Crimes)

PR.425
SC.50

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 143 ಎಲ್ಎಜಿ 2013, ಬೆಂಗಳೂರು, ದಿನಾಂಕ: 28–05–2014

ಶ್ರೀ ಎಂ.ಎಸ್.ತುಗಶೆಟ್ಟಿ, ವಕೀಲರು, ಇವರನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1977ರ ನಿಯಮ 26(3)ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹುದ್ದೆಯ ಅಧಿಕಾರವನ್ನು ವಹಿಸಿಕೊಳ್ಳುವ ದಿನಾಂಕದಿಂದ ಜಾರಿಗೆ ಬರುವಂತೆ ಒಂದು ವರ್ಷದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಅಪರ ಸರ್ಕಾರಿ ವಕೀಲರ ಹುದ್ದೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ, ಮತ್ತು ಅವರ ಹೆಸರಿನಲ್ಲಿ,
ಹೆಚ್.ಎಸ್.ಜಯರಾಮು,
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–2),
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

P.R. 417
S.C. 25

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 120 ಎಲ್ಎಜಿ 2013, ಬೆಂಗಳೂರು, ದಿನಾಂಕ: 09–06–2014

ಶ್ರೀ ಸೈಯದ್ ಜಾವೀದ–ಉಲ್–ಹಕ್, ವಕೀಲರು, ಇವರನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1977ರ ನಿಯಮ 26(3)ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹುದ್ದೆಯ ಅಧಿಕಾರವನ್ನು ವಹಿಸಿಕೊಳ್ಳುವ ದಿನಾಂಕದಿಂದ ಜಾರಿಗೆ ಬರುವಂತೆ ಒಂದು ವರ್ಷದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ರಾಯಚೂರು ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ, ಮತ್ತು ಅವರ ಹೆಸರಿನಲ್ಲಿ,
ಹೆಚ್.ಎಸ್.ಜಯರಾಮು,
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–2),
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

P.R. 418
S.C. 25

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಲಾ 109 ಎಲ್ಎಜಿ 2013, ಬೆಂಗಳೂರು, ದಿನಾಂಕ: 26–06–2014

ಶ್ರೀ ಬಿ.ನಂಜುಂಡಸ್ವಾಮಿ, ವಕೀಲರು, ಇವರನ್ನು ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1977ರ ನಿಯಮ 26(3)ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹುದ್ದೆಯ ಅಧಿಕಾರವನ್ನು ವಹಿಸಿಕೊಳ್ಳುವ ದಿನಾಂಕದಿಂದ ಜಾರಿಗೆ ಬರುವಂತೆ ಒಂದು ವರ್ಷದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಅಪರ ಸರ್ಕಾರಿ ವಕೀಲರ ಹುದ್ದೆಗೆ ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ, ಮತ್ತು ಅವರ ಹೆಸರಿನಲ್ಲಿ,
ಹೆಚ್.ಎಸ್.ಜಯರಾಮು,
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–2),
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

P.R. 419
S.C. 25

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಲಾ 212 ಎಲ್ಎಜಿ 2013, ಬೆಂಗಳೂರು, ದಿನಾಂಕ: 19–05–2014

ಶ್ರೀ ಎ.ರವೀಂದ್ರ, ಜಿಲ್ಲಾ ಸರ್ಕಾರಿ ವಕೀಲರು, ಚಿಕ್ಕಮಗಳೂರು ಜಿಲ್ಲೆ ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 1977ರ ನಿಯಮ 5(6)ರಡಿಯಲ್ಲಿ ಜಿಲ್ಲಾ ಸರ್ಕಾರಿ ವಕೀಲರ ಹುದ್ದೆಯಿಂದ ಬಿಡುಗಡೆ ಮಾಡಲಾಗಿದೆ ಹಾಗೂ ಸದರಿಯವರಿಗೆ ಒಂದು ತಿಂಗಳ ನೋಟೀಸ್‌ನ ಬದಲು ಒಂದು ತಿಂಗಳ ರಿಟೇನರ್ ಫೀ ಮಂಜೂರು ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ, ಮತ್ತು ಅವರ ಹೆಸರಿನಲ್ಲಿ,
ಹೆಚ್.ಎಸ್.ಜಯರಾಮು,
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–2),
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

P.R. 420
S.C. 25

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 294 ಎಲ್‌ಆರ್‌ಎ 2013 ಬೆಂಗಳೂರು, ದಿನಾಂಕ: 31.05.2014.

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 48ರ ಉಪ ಕಲಂ (1)ರಿಂದ (3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ಕೊರಟಗೆರೆ ತಾಲ್ಲೂಕು ಭೂ ನ್ಯಾಯ ಮಂಡಳಿಯನ್ನು ರಚಿಸಿ ಆದೇಶ ಹೊರಡಿಸಿದೆ.

ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು	1) ಶ್ರೀ ಸಿ. ಬಿ. ಹರೀಶ್ ಬಿನ್ ಬಸವರಾಜು, ಚಿನ್ನಹಳ್ಳಿ ಅಂಚೆ ಕೋಳಾಲ ಹೋಬಳಿ, ಕೊರಟಗೆರೆ ತಾಲ್ಲೂಕು. 2) ಶ್ರೀ ಸಂಜೀವಯ್ಯ ಬಿನ್ ಚಿಕ್ಕಹನುಮಯ್ಯ ಚನ್ನರಾಯನದುರ್ಗ, ಮಲ್ಲೆಕಾವು ಅಂಚೆ ಕೊರಟಗೆರೆ ತಾಲ್ಲೂಕು. 3) ಶ್ರೀ ಮಂಜುನಾಥ ಬಿನ್ ನರಸಿಂಹ ಪ್ರಸಾದ್, ವಡ್ಡಗೆರೆ, ವಡ್ಡಗೆರೆ ಅಂಚೆ, ಕಸಬಾ ಹೋಬಳಿ, ಕೊರಟಗೆರೆ ತಾಲ್ಲೂಕು. 4) ಶ್ರೀ ರಂಗರಾಜು ಬಿನ್ ರಂಗಯ್ಯ, ಬುಕ್ಕಪಟ್ಟಣ ಅಂಚೆ, ಸಿ. ಎನ್. ದುರ್ಗ, ಕೊರಟಗೆರೆ ತಾಲ್ಲೂಕು. (ಮೀಸಲಾತಿ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಎಂ. ದಾಕ್ಷಾಯಣಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂಸುಧಾರಣೆ)

PR.409
SC.15

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 76 ಎಲ್‌ಆರ್‌ಎ 2014 ಬೆಂಗಳೂರು, ದಿನಾಂಕ: 14.05.2014

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 48ರ ಉಪ ಕಲಂ (1)ರಿಂದ (3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ಬಳ್ಳಾರಿ ತಾಲ್ಲೂಕು ಭೂ ನ್ಯಾಯ ಮಂಡಳಿಯನ್ನು ರಚಿಸಿ ಆದೇಶ ಹೊರಡಿಸಿದೆ.

ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲ್ಲೂಕು.	1) ಶ್ರೀ ಅನಿಲ್ ಹೆಚ್. ಲಾಡ್ ತಂದೆ ದಿ: ಹೀರೋಜಿ ಲಾಡ್, ಬಳ್ಳಾರಿ 2) ಶ್ರೀ ಪರುಶುರಾಮುಡು ತಂದೆ ಲೇಟ್ ತಿಮ್ಮಪ್ಪ, ವಾರ್ಡ್ ನಂ. 34, ಮನೆ ನಂ: 37/ಬಿ ಓಪಿಪಿ ಸ್ತ್ರೀ ಸೇವಾ ನಿಕೇತನ ಕ್ಲಬ್ ರೋಡ್, ಎಸ್.ಪಿ. ಸರ್ಕಲ್ ಹತ್ತಿರ, ಬಳ್ಳಾರಿ. 3) ಶ್ರೀಮತಿ ಸೌಮ್ಯ ಗಂಡ ಮಲ್ಲಿಕಾರ್ಜುನ, ಹೆಚ್ ಮನೆ–ಸಂಖ್ಯೆ: 161 ವಾರ್ಡ್ ಸಂಖ್ಯೆ: 09, ತೇರುಬೀದಿ, ಬಳ್ಳಾರಿ. 4) ಶ್ರೀ ಎಮ್. ನರೇಶ್ ಕುಮಾರ್, ತಂದೆ ಎಮ್. ನಾಗರಾಜ್, ಮನೆ ಸಂಖ್ಯೆ:178, ವಾರ್ಡ್ 16, ವಿಶ್ವನಾಥಪುರ ಕಾಲೋನಿ 1ನೇ ಕ್ರಾಸ್ ಸರ್ಕಾರಿ ಅತಿಥಿ ಗೃಹದ ಹತ್ತಿರ, ಬಳ್ಳಾರಿ (ಮೀಸಲಾತಿ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಎಂ. ದಾಕ್ಷಾಯಣಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂಸುಧಾರಣೆ)

PR.410
SC.15

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 66 ಎಲ್‌ಆರ್‌ಎ 2014 ಬೆಂಗಳೂರು, ದಿನಾಂಕ: 12.05.2014

ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 48ರ ಉಪ ಕಲಂ (1)ರಿಂದ (3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ಭೂ ನ್ಯಾಯ ಮಂಡಳಿಗೆ ಈ ಹಿಂದೆ ಮಾಡಿದ್ದ ಎಲ್ಲಾ ಅಧಿಕಾರೇತರ ಸದಸ್ಯರ ನಾಮ ನಿರ್ದೇಶನಗಳನ್ನು ರದ್ದುಪಡಿಸಿ, ಅವರ ಬದಲಿಗೆ ಈ ಕೆಳಕಂಡವರನ್ನು ಅಧಿಕಾರತೇರ ಸದಸ್ಯರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನಾಮನಿರ್ದೇಶನ ಮಾಡಿ ಬಂಟ್ವಾಳ ತಾಲ್ಲೂಕು ಭೂ ನ್ಯಾಯ ಮಂಡಳಿಯನ್ನು ರಚಿಸಿ ಆದೇಶ ಹೊರಡಿಸಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2014-16
Licensed to post without prepayment **WPP No. 297**

ಭೂ ನ್ಯಾಯ ಮಂಡಳಿಯ ಹೆಸರು	ಅಧಿಕಾರೇತರ ಸದಸ್ಯರ ಹೆಸರು ಮತ್ತು ವಿಳಾಸ
ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕು	1) ಶ್ರೀ ಈಶ್ವರ ಪೂಜಾರಿ, ಬಿನ್ ಜಿನ್ನಪ್ಪ ಪೂಜಾರಿ, ಹಿರ್ತಡ್ಕ ಮನೆ, ಕಡೇಶ್ವಾಲ್ಯ ಬಂಟ್ವಾಳ ತಾಲ್ಲೂಕು. 2) ಶ್ರೀ ಮಹಮ್ಮದ್ ಶರೀಫ್ ಬಿನ್ ಜಮಾಲುದ್ದೀನ್ ಕಲಾಯಿ ಅಂಚೆ ಬಂಟ್ವಾಳ ತಾಲ್ಲೂಕು ದಕ್ಷಿಣ ಕನ್ನಡ ಜಿಲ್ಲೆ. 3) ಶ್ರೀ ಯುವರಾಜ ಆಳ್ವ ಬಿನ್ ಚೆಲುವಯ್ಯ ಆಳ್ವ ಅಜ್ಜಿಬೆಟ್ಟು ಗ್ರಾಮ ಚೆನ್ನೈತ್ತೋಡಿ, ಬಂಟ್ವಾಳ ತಾಲ್ಲೂಕು 4) ಶ್ರೀ ಪರಮೇಶ್ವರ ನಾಯ್ಕ್ ತಂದೆ ಲೋಕಯ್ಯ ನಾಯ್ಕ್ ಕಕ್ಕೆಪದವು ಮನೆ ಉಳಿಗ್ರಾಮ, ಬಂಟ್ವಾಳ ತಾಲ್ಲೂಕು ದಕ್ಷಿಣ ಕನ್ನಡ ಜಿಲ್ಲೆ. (ಮೀಸಲಾತಿ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಎಂ. ದಾಕ್ಷಾಯಣಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ಭೂಸುಧಾರಣೆ)

PR.411

SC.15

ಆರ್ಥಿಕ ಸಚಿವಾಲಯ

ಅಧಿಸೂಚನೆ ಸಂಖ್ಯೆ: ಆಇ 74 ವಾತೆಇ 2014, ಬೆಂಗಳೂರು, ದಿನಾಂಕ: 15.04.2014.

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) 2013ರ ಆದೇಶದ ಕಂಡಿಕೆ 3 ಮತ್ತು ಕಂಡಿಕೆ 13 ರಡಿ ಮತ್ತು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು 2013 ರ ನಿಯಮ 5ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ವಾಣಿಜ್ಯ ತೆರಿಗೆಗಳ ಇಲಾಖೆಯ ವ್ಯಾಪ್ತಿಯಡಿ ಬರುವ ಸಮೂಹ "ಎ" (ಕಿರಿಯ ಶ್ರೇಣಿ) ಹುದ್ದೆಯಾದ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರ ವೃಂದದಲ್ಲಿ ರಾಜ್ಯ ವ್ಯಾಪ್ತಿ ಸ್ಥಳೀಯ ವೃಂದವನ್ನು ರಚಿಸಿ ಸದರಿ ವೃಂದದಲ್ಲಿನ ಹುದ್ದೆಗಳ ಸಂಖ್ಯೆ ಮತ್ತು ರೋಸ್ಟರ್ ಬಿಂದುಗಳನ್ನು ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಿರುವಂತೆ ಅಧಿಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಬಿ. ಅಳವಂಡಿ

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ–2 & ಸಮನ್ವಯ)

ಅಧಿಸೂಚನೆ ಸಂ: ಆಇ 74 ವಾತೆಇ 2014 ದಿ: 15.04.2014ರ ಅನುಬಂಧ

ಕ್ರ.ಸಂ.	ವೃಂದ	ಹುದ್ದೆ	ವೇತನ ಶ್ರೇಣಿ (ರೂ.ಗಳಲ್ಲಿ)	ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಮಂಜೂರಾದ			ರಾಜ್ಯ ಮಟ್ಟದ ಕಛೇರಿಯಲ್ಲಿನ ವೃಂದ ಬಲ	ರಾಜ್ಯ ಮಟ್ಟದ ಸ್ಥಳೀಯ ವೃಂದ ಶೇಕಡ 8ರಂತೆ	ಹೈದ್ರಾಬಾದ್–ಕರ್ನಾಟಕ ಪ್ರದೇಶ ವ್ಯಾಪ್ತಿಯ ಕಛೇರಿಗಳಲ್ಲಿನ ವೃಂದ ಬಲ	ಪ್ರಾದೇಶಿಕ ಸ್ಥಳೀಯ ವೃಂದ ಶೇಕಡ 75ರಂತೆ	ರಾಜ್ಯ ವ್ಯಾಪಿ ಸ್ಥಳೀಯ ವೃಂದ	ರಾಜ್ಯವ್ಯಾಪಿ ಸ್ಥಳೀಯ ವೃಂದದಲ್ಲಿ ನೇರ ನೇಮಕಾತಿ ಹಾಗೂ ಮುಂಬಡ್ತಿಗೆ ಗುರುತಿಸಲಾದ ಹುದ್ದೆಗಳು			ಉಳಿದ ಮೂಲ ವೃಂದ
				ಮೂಲ ವೃಂದ	ನೇರ ನೇಮಕಾತಿ	ಮುಂಬಡ್ತಿ									
1	2	3	4	5	6	7	8	9	10	11	12(9+11)	13			14
												ನೇರ ನೇಮಕಾತಿ	ಮುಂಬಡ್ತಿ	ಒಟ್ಟು	
1	ಎ	ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು	28100–50100	321	50%	50%	53	5	29	22	27	14	13	27	294

ರೋಸ್ಟರ್

ಮುಂಬಡ್ತಿ: ರೋಸ್ಟರ್ ಚಕ್ರ–1ನೇ ಬಿಂದುವಿನಿಂದ 13 ಬಿಂದುಗಳ ಚಕ್ರದಲ್ಲಿ 1 ಮತ್ತು 7 ಪ.ಜಾ. 2ಪ.ಪಂ. ಮತ್ತು ಉಳಿದ ಬಿಂದುಗಳು ಇತರರಿಗೆ ಮೀಸಲಿರಿಸಲಾಗಿದೆ.

ನೇರ ನೇಮಕಾತಿ: ರೋಸ್ಟರ್ ಚಕ್ರ–1 ರಿಂದ 100 ರಿಕ್ತ ಸ್ಥಾನಗಳ 1ನೇ ರೋಸ್ಟರ್‌ನಲ್ಲಿ 1 ಮತ್ತು 11ನೇ ಬಿಂದು ಪ.ಜಾ ಹಾಗೂ 3ನೇ ಬಿಂದು ಪ.ಪಂ.ಮತ್ತು ಉಳಿದ ಬಿಂದುಗಳು ಇತರರಿಗೆ ಮೀಸಲಿರಿಸಲಾಗಿದೆ.

ಟಿಪ್ಪಣಿ: ರಾಜ್ಯ ಮಟ್ಟದ ಕಛೇರಿಗಳೆಂದರೆ: ಆಯುಕ್ತರ ಕಛೇರಿ ಅಪರ ಆಯುಕ್ತರ ಕಛೇರಿ (ಜಾರಿ), ಅಪರ ಆಯುಕ್ತರ ಕಛೇರಿ (ವಲಯ–1), (ವಲಯ–2) ಮತ್ತು (ವಲಯ–3) ಬೆಂಗಳೂರು ಮತ್ತು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ ಬೆಂಗಳೂರು.

ಎಸ್. ಬಿ. ಅಳವಂಡಿ

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ.

PR.423

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59